**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **35**

ದೋ.ಸಾ. ಃ **41**

ದಿ.**09.03.2026**

ಹೆಸರು ಃ ಚನ್ನೇಗೌಡ ಆರ್.ಜಿ.

ತಂದೆಯ ಹೆಸರು ಃ ಗಂಗಪ್ಪ

ವಯಸ್ಸು ಃ **46** ವರ್ಷ

ಉದ್ಯೋಗ ಃ ಪೋಲೀಸ್ ನಿರೀಕ್ಷಕರು, ನಗರ ಗುಪ್ತ ಶಾಖೆ, ಬೆಂಗಳೂರು ನಗರ

ವಾಸಸ್ಥಳ ಃ ಬೆಂಗಳೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.13.08.2020 ರಿಂದ 03.08.2023 ರವರೆಗೆ ನಾನು ಕ್ಯಾತ್ಸಂದ್ರ ವೃತ್ತದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.20.03.2023 ರಂದು ಈ ಪ್ರಕರಣದ ಕಡತವನ್ನು ಹೆಬ್ಬೂರು ಠಾಣೆಯ ಎಎಸ್ಐ ರುದ್ರಮೂರ್ತಿಯವರಿಂದ ಪಡೆದು, ಪರಿಶೀಲಿಸಿ, ಅದೇ ದಿನ ಆರೋಪಿ ಅಣ್ಣಪ್ಪ ಅಲಿಯಾಸ್ ಅರುಣ ರವರ ಪತ್ತೆಗಾಗಿ ಹೆಚ್ ಸಿ 115 ಪುಟ್ಟರಾಜು ಮತ್ತು ಪಿಸಿ 1050 ನಂದೀಶ್ ರವರನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಮೃತದೇಹದ ಪಂಚನಾಮೆಯನ್ನು ತುಮಕೂರು ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 3.45 ರಿಂದ 5.45 ಗಂಟೆಯವರೆಗೆ ನಡೆಸಿರುತ್ತೇನೆ. ಆ ಕಾಲದಲ್ಲಿ ಪಂಚರಾದ ರಘು, ಮಂಜುನಾಥ ಮತ್ತು ಗುಡಿಯಪ್ಪ ಹಾಜರು ಇದ್ದರು. ಮೃತದೇಹದ

ಪಂಚನಾಮೆ ಕಾಲದಲ್ಲಿ ಮೃತನ ರಕ್ತ ಸಂಬಂಧಿಕರಾದ ಗಂಗಲಕ್ಷ್ಮಿ, ವೆಂಕಟರಂಗಯ್ಯ ಇತರೆ ಸಾಕ್ಷಿದಾರರಾದ ದಯಾನಂದ್, ವೆಂಕಟೇಶ್ ಮತ್ತು ಸುರೇಶ್ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಮೃತದೇಹದ ಪಂಚನಾಮೆಯನ್ನು ನಿಶಾನೆ ಪಿ33 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ33(ಸಿ) ಎಂದು ಗುರುತಿಸಲಾಯಿತು. ವೆಂಕಟರಂಗಯ್ಯ ನನ್ನ ಮುಂದೆ ನಿಶಾನೆ ಪಿ33(ಬಿ) ಯಂತೆ ಹೇಳಿಕೆ ಕೊಟ್ಟಿರುತ್ತಾರೆ.

3. ಮೃತದೇಹದ ಪಂಚನಾಮೆ ಕಾಲಕ್ಕೆ ತನಿಖೆಗೆ ಸಹಕರಿಸಿದ ನಂದೀಶ್ ಹೆಚ್ ಸಿ 287 ರವರು ಫೋಟೋಗಳನ್ನು ತೆಗೆದಿರುತ್ತಾರೆ. ಆ ಫೋಟೋಗಳನ್ನು ನಿಶಾನೆ ಪಿ15 ರಿಂದ 24 ಎಂದು ಗುರುತಿಸಲಾಗಿದೆ. ನಂದೀಶ್ ರವರು ನೀಡಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿ ಪ್ರಮಾಣಪತ್ರವನ್ನು ನಿಶಾನೆ ಪಿ59 ಎಂದು ಈಗಾಗಲೇ ಗುರುತಿಸಲಾಗಿದೆ.

4. ದಿ.21.03.2023 ರಂದು ಆರೋಪಿ ಅಣ್ಣಪ್ಪ ಅಲಿಯಾಸ್ ಅರುಣರವರನ್ನು ಹೆಚ್ ಸಿ 115 ಪುಟ್ಟರಾಜು ಮತ್ತು ಪಿಸಿ 1050 ನಂದೀಶ್ ರವರು ಸಾಯಂಕಾಲ 3.30 ಗಂಟೆಗೆ ಬೆಂಗಳೂರು ಉತ್ತರ ಆಂಧ್ರಹಳ್ಳಿ ರಂಗನಾಥ ಬಾರಿನಲ್ಲಿ ವಶಕ್ಕೆ ಪಡೆದು ಸಂಜೆ 5.30 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿ, ವರದಿಯನ್ನು ನೀಡಿರುತ್ತಾರೆ. ಆ ವರದಿಯನ್ನು ನಿಶಾನೆ ಪಿ60 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ60(ಬಿ) ಎಂದು ಗುರುತಿಸಲಾಯಿತು. ಆರೋಪಿ ಅರುಣರವರನ್ನು ವಿಚಾರಣೆಗೆ ಒಳಪಡಿಸಿ, ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಆರೋಪಿಯು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ನನ್ನ ಜೊತೆ ಬಂದರೆ ನಾನು ಪಾಂಡು ಮತ್ತು ಶಿವಸ್ವಾಮಿಯನ್ನು ಹೊಡೆದ ಸ್ಥಳ ಮತ್ತು ದೊಣ್ಣೆಯನ್ನು ಬಿಸಾಕಿರುವ ಸ್ಥಳವನ್ನು ತೋರಿಸಿ ಹಾಜರುಪಡಿಸುತ್ತೇನೆಂದು ಹೇಳಿರುತ್ತಾನೆ. ಆ ಹೇಳಿಕೆಯ ಭಾಗವನ್ನು ನಿಶಾನೆ ಪಿ71 ಎಂದು ಗುರುತಿಸಲಾಯಿತು. ಅಣ್ಣಪ್ಪ ಸ್ವಾಮಿ ಅಲಿಯಾಸ್ ಅರುಣ ಎಂದರೆ ಈಗ ವಿಸಿಯಲ್ಲಿ ಕಾಣುವ ಆರೋಪಿ.

5. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯಂತೆ ಪಂಚರಾದ ರಂಗಸ್ವಾಮಿ,

ಜಗದೀಶ್ ಹಾಗೂ ತನಿಖಾ ಸಿಬ್ಬಂದಿಯೊಂದಿಗೆ ನಮ್ಮ ಜೀಪಿನಲ್ಲಿ ಕೃತ್ಯ ಸ್ಥಳವಾದ ವೈ.ಕೆ.ಆರ್ ಸರ್ಕಲ್ ಬನ್ನಿಮರದ ಕಟ್ಟೆ ಗ್ರಾಮದ ತಾಂಡವೇಶ್ವರ ವುಡ್ ವರ್ಕ್ ಅಂಗಡಿಯ ಮುಂಭಾಗ ಹೋಗಿ ಆರೋಪಿಯ ಸೂಚನೆಯಂತೆ ಜೀಪನ್ನು ನಿಲ್ಲಿಸಿದಾಗ ಆರೋಪಿಯು ಕೃತ್ಯ ನಡೆದ ಸ್ಥಳವನ್ನು ಮತ್ತು ತಾನು ಕೃತ್ಯಕ್ಕೆ ಬಳಸಿದ ದೊಣ್ಣೆಯನ್ನು ಬಿಸಾಕಿದ ಸ್ಥಳವನ್ನು ತೋರಿಸಿದ್ದು, ಪಂಚರ ಸಮಕ್ಷಮ ಬೆಳಿಗ್ಗೆ 11.00-12.00 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ನಿಶಾನೆ ಪಿ1 ಪಂಚನಾಮೆ ಆಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಶಾನೆ ಪಿ2 ಮತ್ತು 3 ಎಂದು ಗುರುತಿಸಲಾಗಿದೆ.

6. ಅದೇ ದಿನ ಗಾಯಾಳು ಶಿವಸ್ವಾಮಿಯವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಅದೇ ದಿನ ಗಾಯಾಳು ಶಿವಸ್ವಾಮಿಯವರು ಕೃತ್ಯ ನಡೆದ ದಿನ ತಾನು ಧರಿಸಿದ್ದ ಬಟ್ಟೆಗಳಾದ ಒಂದು ಮಾಸಲು ಬಣ್ಣದ ಶರ್ಟ್, ಕಾಫಿ ಕಲರ್ ನ ಒಂದು ಪ್ಯಾಂಟ್, ಮಾಸಲು ಬಣ್ಣದ ಟವಲನ್ನು ಹಾಜರುಪಡಿಸಿದ್ದು, ಪಂಚರಾದ ರಂಗಸ್ವಾಮಿ ಮತ್ತು ಅಶ್ವತ್ಥ ಕುಮಾರ್ ರವರನ್ನು ಬರಮಾಡಿಕೊಂಡು, ಅವರ ಸಮಕ್ಷಮ ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ನಿಶಾನೆ ಪಿ8 ರಂತೆ ಮಹಜರ್ ಮಾಡಿ, ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಶಾನೆ ಪಿ8 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ8(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪಂಚಸಾಕ್ಷಿದಾರರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ26 ಎಂದು ಗುರುತಿಸಲಾಗಿದೆ. ನಿಶಾನೆ ಪಿ26 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ26(ಸಿ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದ ಫೋಟೋವನ್ನು ನಿಶಾನೆ ಪಿ27 ಎಂದು ಗುರುತಿಸಲಾಗಿದೆ. ಅನಂತರ ಅಮಾನತ್ತುಪಡಿಸಿಕೊಂಡ ಮುದ್ದೇಮಾಲುಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ಮುದ್ದೇಮಾಲುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ 2 ರಿಂದ 4 ಎಂದು

ಗುರುತಿಸಲಾಗಿದೆ.

7. ನಂತರ ಆರೋಪಿಯ ಮೈಮೇಲಿದ್ದ ಬಟ್ಟೆಗಳನ್ನು ಸಂಗ್ರಹಿಸಿಕೊಡಲು ಮತ್ತು ಆರೋಪಿಯ ರಕ್ತದ ಗುಂಪನ್ನು ಸಂಗ್ರಹಿಸಿ ವರದಿ ನೀಡಲು ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಮಾಡಿರುತ್ತೇನೆ ಮತ್ತು ಆ ಮನವಿಯೊಂದಿಗೆ ಆರೋಪಿಯನ್ನು ಹಾಜರುಪಡಿಸಿರುತ್ತೇನೆ. ಆ ಮನವಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ41 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ41(ಬಿ) ಎಂದು ಗುರುತಿಸಲಾಯಿತು.

8. ನಂತರ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

9. ನಂತರ ಬೆಂಗಾವಲಿಗೆ ಹೋಗಿದ್ದ ಪಿಸಿ 627 ಕಿಶೋರ್ ಮತ್ತು ಪಿಸಿ 804 ಅಬಿ ರವರು ನನಗೆ ಬಂದು ವರದಿ ಮಾಡಿದ್ದು, ಆರೋಪಿಯ ಬಾಬ್ತು ಬಟ್ಟೆಗಳನ್ನು ಹಾಜರುಪಡಿಸಿ, ವರದಿ ನೀಡಿರುತ್ತಾರೆ. ಆ ವರದಿಯನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ48 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ48(ಬಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು